ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 1, 3, 4 ನೇ ಪ್ರತಿವಾದಿಗಳ ಪರ ಶ್ರೀ ಬಿ.ವಿ.ಎಲ್ ವಕೀಲರಿಂದಃ

ಪ್ರತಿವಾದಿಗಳು ಬೇರೆ ಬೇರೆ ಊರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. ದಾವೆ ಸಲ್ಲಿಸುವಾಗ ನಾನು ಎಲ್ಲಾ ಪ್ರತಿವಾದಿಗಳ ವಿಳಾಸ ಒಂದೇ ಎಂದು ನಮ್ಮ ವಕೀಲರಿಗೆ ಹೇಳಿ ಈ ದಾವೆ ಸಲ್ಲಿಸಿದ್ದೆ ಎಂದರೆ ಸರಿ, ಸಾಕ್ಷಿಯು ಸ್ವತಃ ಅವರಲ್ಲಿ ಒಬ್ಬರು ಮಾತ್ರ ಬೇರೆ ವಾಸವಿದ್ದಾರೆ, ಉಳಿದವರೆಲ್ಲರೂ ಒಟ್ಟಿಗೆ ವಾಸವಿದ್ದಾರೆ ಎಂದು ನುಡಿಯತ್ತಾರೆ. 5 ನೇ ಪ್ರತಿವಾದಿ ಕುಣಿಗಲ್‌ನಲ್ಲಿ ವಾಸವಿದ್ದಾರೆ. 5 ನೇ ಪ್ರತಿವಾದಿಯ ಕುಣಿಗಲ್ ವಿಳಾಸವನ್ನು ವಾದಪತ್ರದಲ್ಲಿ ನಾನು ಬರೆಸಿಲ್ಲ ಎಂದರೆ ಸರಿ. ಶಿವಣ್ಣನವರು ಮದುವೆಗಿಂತ ಮೊದಲೇ ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅವರು ತಮ್ಮ ಅಣ್ಣ ಮಾರಣ್ಣನವರ ಮನೆಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ನನ್ನ ಮತ್ತು ಶಿವಣ್ಣನವರ ಮದುವೆಯಾದಾಗ ಮಾರಣ್ಣನವರ ಮದುವೆಯಾಗಿತ್ತು ಎಂದರೆ ಸರಿ. ಮಾರಣ್ಣನವರ ಮನೆಯಲ್ಲಿ ಮಾರಣ್ಣ ಹಾಗೂ ಅವರ ಹೆಂಡತಿ ಮಕ್ಕಳು ವಾಸವಿದ್ದರು ಎಂದರೆ ಸರಿ. ಮದುವೆಯ ನಂತರ ನಾನು ಶಿವಣ್ಣನವರೊಂದಿಗೆ ಪ್ರತ್ಯೇಕ ವಾಸವಿದ್ದೆ ಎಂದರೆ ಸರಿ. ಮದುವೆಯ ನಂತರ ನಾನು ಊರಲ್ಲಿ ವಾಸವಿರಲಿಲ್ಲ ಎಂದರೆ ಸರಿ, ಹಬ್ಬ ಹರಿದಿನಗಳಿಗೆ ಊರಿಗೆ ಬರುತ್ತಿದ್ದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಶಿವಣ್ಣನವರ ಮರಣಾ ನಂತರವೂ ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ ಎಂದರೆ ಸರಿ. ಶಿವಣ್ಣನವರ ಮರಣಾ ನಂತರ ನಾನು ಪ್ರತಿವಾದಿಗಳೊಂದಿಗೆ ವಾಸವಿದ್ದು ಅವರು ನನಗೆ ಕಿರುಕುಳ ಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ

ಸರಿಯಲ್ಲ. ಪ್ರತಿವಾದಿಗಳು ನನಗೆ ಕಿರುಕುಳ ನೀಡಿದ್ದಾರೆಂದು ನಾನು ಪೊಲೀಸರಿಗೆ ದೂರು ಕೊಟ್ಟಿರಲಿಲ್ಲ. ನಾನು ವಾರದ 6 ದಿನವೂ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿ. ಅಗತ್ಯವಿದ್ದಾಗ ಓವರ್ ಟೈಮ್ ಡ್ಯೂಟಿ ಎಂದು ನನಗೆ ಭಾನುವಾರವೂ ಕೆಲಸವಿರುತ್ತಿತ್ತು ಎಂದರೆ ಸರಿಯಲ್ಲ. ನಾನು ಕೆಲಸಕ್ಕೆ ಹೋಗುತ್ತಿದ್ದ ಕಾರಣ ಊರಿಗೆ ಬಂದರೆ ಒಂದೇ ಬಾರಿ 3-4 ದಿನಗಳ ಕಾಲ ಊರಲ್ಲಿ ಇರಲು ನನಗೆ ಆಗುತ್ತಿರಲಿಲ್ಲ ಎಂದರೆ ಸರಿ. 3 ಮತ್ತು 4 ನೇ ಪ್ರತಿವಾದಿಗಳು ಪ್ರತ್ಯೇಕ ವಾಸವಿದ್ದರು ಎಂದರೆ ಸರಿ.

ದಾವಾ ಸ್ವತ್ತುಗಳು ಪ್ರತಿವಾದಿಗಳಿಗೆ ಹೇಗೆ ಬಂದಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತುಗಳ ಮೂಲ ದಾಖಲೆಗಳನ್ನು ನಾನು ಪರಿಶೀಲಿಸಿದ್ದೇನೆ. ನಾನು ಪರಿಶೀಲಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಾನು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು ಪರಿಶೀಲಿಸಿಲ್ಲ ಹಾಗೂ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ 2 ನೇ ಐಟಂ ಸ್ವತ್ತು 1 ನೇ ಪ್ರತಿವಾದಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪಿತ್ರಾರ್ಜಿತವಾಗಿ ಬಂದ ಸ್ವತ್ತು ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು 1972 ರಲ್ಲಿ 1 ನೇ ಪ್ರತಿವಾದಿ ಚಿಕ್ಕ ಹೆಂಜಯ್ಯನವರಿಂದ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳ 3 ನೇ ಐಟಂ ಸ್ವತ್ತು 3 ನೇ ಪ್ರತಿವಾದಿಗೆ

1985 ರಲ್ಲಿ ಆದ ವಿಭಾಗದಲ್ಲಿ ತಿಮ್ಮಯ್ಯನವರಿಂದ ನೇರವಾಗಿ ಬಂದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ 1 ನೇ ಐಟಂ ಸ್ವತ್ತನ್ನು ಈಗ ಶ್ರೀಕಂಠಯ್ಯನವರಿಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಮಾರಾಟ ಮಾಡಿದ್ದಾರೆ. 2015 ರಲ್ಲಿ ಸದರಿ ಸ್ವತ್ತನ್ನು 1 ನೇ ಪ್ರತಿವಾದಿ ಶ್ರೀಕಂಠಯ್ಯನವರಿಗೆ ಮಾರಾಟ ಮಾಡಿದ್ದರು. ಈ ವಿಚಾರವನ್ನು ನಾನು ನನ್ನ ವಾದಪತ್ರ ಅಥವಾ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿದ್ದೇನಾ ಎಂದರೆ ಆಗ ನನಗೆ ಗೊತ್ತಿರಲಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಆಸ್ತಿ ಮಾರಾಟ ಮಾಡಿದ ವಿಚಾರ ತಿಳಿದ ನಂತರ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ದಾವಾ ಸ್ವತ್ತುಗಳ 1 ನೇ ಐಟಂ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ ಪೈಕಿ 4 ನೇ ಐಟಂ ಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು, 1 ನೇ ಪ್ರತಿವಾದಿ ಸದರಿ ಸ್ವತ್ತನ್ನು ವಿದ್ಯುತ್ ಸಂಪರ್ಕ ಪಡೆಯುವ ಸಲುವಾಗಿ 4 ನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಟ್ಟಿದ್ದಾರೆ. ಈ ರೀತಿ 4 ನೇ ಪ್ರತಿವಾದಿಯ ಹೆಸರಿಗೆ ಆಸ್ತಿ ಬದಲಾವಣೆಯಾದ ವಿಚಾರ ನನಗೆ ನನ್ನ ಗಂಡ ತಿಳಿಸಿದ್ದರು. ಸಾಕ್ಷಿದಾರರಿಗೆ ದಿನಾಂಕ 18.08.2004 ರ ಪಂಚಾಯತ್ ಪಾರಿಕತ್ತನ್ನು ತೋರಿಸಿದಾಗ ಅದರಲ್ಲಿ ತಮ್ಮ ಗಂಡ ಶಿವಣ್ಣನವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಕಾರಣ ಸದರಿ ದಾಖಲೆಯನ್ನು ಡ್ಯೂಟಿ ಅಂಡ್ ಪೆನಾಲ್ಟಿ ಕಟ್ಟುವ ಷರತ್ತಿನ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ದಾವಾ ಸ್ವತ್ತುಗಳ ಪೈಕಿ 4 ನೇ ಐಟಂ ಸ್ವತ್ತನ್ನು 4 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಮಾಡಲು ಶಿವಣ್ಣನವರ ಒಪ್ಪಿಗೆ ಇತ್ತು ಎಂದರೆ

ಸಾಕ್ಷಿಯು ಒಟ್ಟು ಕುಟುಂಬದಲ್ಲಿದ್ದ ಕಾರಣ ರಾಗಿ ಗಿರಣಿಗೆ ವಿದ್ಯುತ್ ಸಂಪರ್ಕ ಪಡೆಯುವ ಸಲುವಾಗಿ ಶಿವಣ್ಣ ಒಪ್ಪಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಿಡಿ-1 ಆಗುವ ಸಮಯದಲ್ಲಿ ನಾವು ಹಾಗೂ 3 ಮತ್ತು 4 ನೇ ಪ್ರತಿವಾದಿಗಳು ಪ್ರತ್ಯೇಕ ವಾಸವಿದ್ದೆವು ಎಂದರೆ ಸರಿಯಲ್ಲ. ವಿದ್ಯಾಭ್ಯಾಸ ಮುಗಿದ ನಂತರ ಶಿವಣ್ಣ ಹಾಗೂ 3 ಮತ್ತು 4 ನೇ ಪ್ರತಿವಾದಿಗಳು ಕೆಲಸಕ್ಕೆ ಹೋಗಿ ಸಂಪಾದನೆ ಮಾಡುತ್ತಿದ್ದರು ಎಂದರೆ ಸರಿ. 3 ನೇ ಪ್ರತಿವಾದಿ 1991 ರಿಂದ ಅಶ್ವತಿ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ 1994-95 ರಿಂದ ಟೈಕೋ ಫೈರ್ ಅಂಡ್ ಸೆಕ್ಯೂರಿಟಿ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಗಳ ಪೈಕಿ 5 ನೇ ಐಟಂ ಸ್ವತ್ತಿನಲ್ಲಿ 3 ನೇ ಪ್ರತಿವಾದಿ ಮನೆ ಕಟ್ಟಿ ವಾಸವಿದ್ದಾರೆ ಎಂದರೆ ಸರಿ. ಮನೆ ಕಟ್ಟಲು 3 ನೇ ಪ್ರತಿವಾದಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2005 ರಲ್ಲಿ ಮನೆ ಕಟ್ಟಿ ಇಲ್ಲಿಂದ ಇಲ್ಲಿಯವರೆಗೂ 3 ನೇ ಪ್ರತಿವಾದಿ ಅದೇ ಮನೆಯಲ್ಲಿ ವಾಸವಿದ್ದಾರೆ ಎಂದರೆ ವಾಸವಿದ್ದಾರೆ, ಆದರೆ ಇಸವಿ ನನಗೆ ಸ್ಪಷ್ಟವಾಗಿ ಗೊತ್ತಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಶಿವಣ್ಣ, 3 ಮತ್ತು 4 ನೇ ಪ್ರತಿವಾದಿಗಳು ಬೇರೆ ಬೇರೆ ವಾಸವಿದ್ದ ಕಾರಣ 3 ನೇ ಪ್ರತಿವಾದಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ಎಲ್ಲಾ ದಾವಾ ಸ್ವತ್ತುಗಳು ಬೆಲೆ ಬಾಳುವ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳಿಗೆ ಹೊಂದಿಕೊಂಡಿರುವ ಅಕ್ಕಪಕ್ಕದಲ್ಲಿರುವ

ಸ್ವತ್ತುಗಳಲ್ಲಿ ಲೇ ಔಟ್ ಮಾಡಿದ್ದಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳಿಗೆ ವಯಸ್ಸಾಗಿದ್ದು ಅವರ ಔಷಧೋಪಚಾರ ಹಾಗೂ ಇತ್ಯಾದಿಗಳನ್ನು ನಾನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. ನಾನು ಸೊಸೆಯಾಗಿ 1 ಮತ್ತು 2 ನೇ ಪ್ರತಿವಾದಿಗಳ ಜೊತೆ ವಾಸ ಮಾಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾವಾ ಸ್ವತ್ತುಗಳಗಳು ಪ್ರತಿವಾದಿ 1, 3 ಮತ್ತು 4 ರವರ ಸ್ವಯಾರ್ಜಿತ ಸ್ವತ್ತುಗಳಾಗಿದ್ದು ಅವುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ 5 ನೇ ಐಟಂ ಸ್ವತ್ತನ್ನು ಖರೀದಿಸಲು 3 ನೇ ಪ್ರತಿವಾದಿ ಆರ್ಥಿಕವಾಗಿ ಸಶಕ್ತರಾಗಿದ್ದ ಕಾರಣ ಅವರ ಸ್ವಂತ ಸಂಪಾದನೆಯಿಂದ ಆಸ್ತಿ ಖರೀಸಿದ್ದಿರು ಎಂದರೆ ಸರಿಯಲ್ಲ.

2010 ರಲ್ಲಿ ಪಂಚಾಯಿತಿ ನಡೆದಿತ್ತು.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ರಾಮನಗರ.